ತೀರದ ಬಿಸಿ ಬಿಸಿ ಆಹಾರವನ್ನು ಸವಿಯುತ್ತಾ, ಅಲೆಗಳ ಆರ್ಭಟವನ್ನು ಕೇಳುತ್ತಾ ಮಳೆಯ ಹನಿಗಳನ್ನು ಅನುಭವಿಸುವುದು ನವೀನ ಅನುಭವ ನೀಡುತ್ತದೆ (ಆದರೆ, ಮಳೆಯಲ್ಲಿ ಸಮುದ್ರದಲ್ಲಿ ಇಳಿಯುವುದು ಅಪಾಯಕಾರಿ, ದೂರದಿಂದಲೇ ಆನಂದಿಸಿ).

**4. ಕೋಟೆಗಳು:** ಕೆಳದಿ ಕೋಟೆ, ಕವಲೇದುರ್ಗ, ಮಿರ್ಜಾನ್ ಕೋಟೆ, ಬೇಕಲಕೋಟೆಗಳು ಮಳೆಗಾಲದಲ್ಲಿ ಹಸಿರು ಹೊದ್ದುಕೊಂಡು ಭಿನ್ನವಾಗಿ ಕಾಣಿಸುತ್ತವೆ.

**5. ಅಭಯಾರಣ್ಯಗಳು:** ನಾಗರಹೊಳೆ, ಬಂಡೀಪುರ, ಭದ್ರಾ ಅಭಯಾರಣ್ಯದ ಕಾಡುಗಳಲ್ಲಿ ಮಳೆಗಾಲದಲ್ಲಿ ಓಡಾಡುವುದು ಮುದ ನೀಡುವ ವಿಷಯ. ಉಳಿದ ಸಮಯ ಎಲೆ ಉದುರಿಸಿಕೊಂಡಿರುವ ಕಾಡುಗಳು ಈ ಸಮಯದಲ್ಲಿ ಮುದ್ದಾಗಿ ಕಾಣಿಸುತ್ತವೆ. ಮಲೆನಾಡಿನ ಯಲ್ಲಾಪುರ ಸುತ್ತಲಿನ ಕಾಡುಗಳು, ಶಿವಮೊಗ್ಗ ಜಿಲ್ಲೆಯ ಕಾಡುಗಳು ಕೂಡ ನಿಮ್ಮ ಪ್ರವಾಸದ ಭಾಗವಾಗಬಹುದು.

**6. ಹೋಂ ಸ್ಟೇಗಳು:** ಮಲೆನಾಡು, ಕೊಡಗು ಮತ್ತು ಕರಾವಳಿಯ ಹಿನ್ನೀರ ಪ್ರದೇಶದಲ್ಲಿರುವ ಗ್ರಾಮೀಣ ಹೋಂ ಸ್ಟೇಗಳು ಅಥವಾ ತೋಟದ ಮನೆಗಳಲ್ಲಿ ಮಳೆಗಾಲದಲ್ಲಿ ಉಳಿಯುವುದು ಒಂದು ವಿಶಿಷ್ಟ ಅನುಭವ. ಕಾಫಿ ತೋಟಗಳು, ಅಡಿಕೆ ತೋಟಗಳು, ಭತ್ತದ ಗದ್ದೆಗಳು ಹಸಿರಾಗಿ ಕಂಗೊಳಿಸುತ್ತಾ, ಮಳೆಯ ಸದ್ದಿನೊಂದಿಗೆ ಸಿಗುವ ಪ್ರಶಾಂತತೆ ನಗರದ ಜಂಜಾಟದಿಂದ ದೂರವಿರಲು ಸೂಕ್ತ. ಶುದ್ಧ ಗ್ರಾಮೀಣ ವಾತಾವರಣ, ಬಿಸಿ ಬಿಸಿ ತಿನಿಸುಗಳು ಮತ್ತು ಅತಿಥಿ ಸತ್ಕಾರ ಮಳೆಗಾಲದ ಪ್ರವಾಸಕ್ಕೆ ಮತ್ತಷ್ಟು ಮೆರುಗು ನೀಡುತ್ತವೆ.

**7. ಪಾರಂಪರಿಕ ತಾಣಗಳು:** ಹಂಪೆಯಂತಹ ವಿಶ್ವಪಾರಂಪರಿಕ ತಾಣಗಳು ಮಳೆಗಾಲದಲ್ಲಿ ಕಾಣುವ ರೀತಿಯೇ ಬೇರೆ. ಮಳೆಯಲ್ಲಿ ತೊಯ್ದು ನಿಂತ ಹಳೆಯ ದೇಗುಲಗಳು ಪ್ರವಾಸಿಗರ ಮನ ತಣಿಸುತ್ತವೆ. ಶ್ರವಣಬೆಳಗೊಳ, ಬೇಲೂರು ಹಳೇಬೀಡಿನ ಶಿಲ್ಪ ಸೌಂದರ್ಯವನ್ನು ಮಳೆಗಾಲದಲ್ಲಿ ನೋಡಿ ನಿಮಗೇ ಆ ಹೊಸತನ ವೇದ್ಯವಾಗುತ್ತದೆ.

## ಮುಂಜಾಗ್ರತೆ ಕ್ರಮಗಳು

ಮಳೆಪ್ರವಾಸ ಆನಂದಮಯವಾಗಬೇಕಾದರೆ, ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಮತ್ತು

**ಆರೋಗ್ಯಕರ ಆಹಾರದ ಬಗ್ಗೆ ಹೆಚ್ಚು ಗಮನವಿರಲಿ. ಬಿಸಿ ಬಿಸಿಯಾದ ಆಹಾರವನ್ನೇ ಆಯ್ಕೆ ಮಾಡಿಕೊಳ್ಳುವುದು ಉತ್ತಮ. ಮಕ್ಕಳ ಜೊತೆ ಪ್ರಯಾಣ ಮಾಡುತ್ತಿದ್ದರೆ ಬಿಸಿ ನೀರಿಗೆ ಆದ್ಯತೆ ನೀಡಿ. ಬೀದಿ ಬದಿಯ ಆಹಾರದಿಂದ ದೂರವಿರಿ.**

### ಪ್ರವಾಸದ ಆಯೋಜನೆ ಹೀಗಿರಲಿ

**ತಾಣದ ಆಯ್ಕೆ:** ನಿಮ್ಮ ಆಸಕ್ತಿ ಏನು ಎಂಬುದರ ನಿರ್ಧಾರ ಮೊದಲು ಮಾಡಿಕೊಳ್ಳಿ (ಅರಣ್ಯ, ಜಲಪಾತ, ಬೆಟ್ಟ, ಕರಾವಳಿ) ಎಂಬುದನ್ನು ನಿರ್ಧರಿಸಿ ಸೂಕ್ತ ತಾಣ ಆಯ್ಕೆ ಮಾಡಿ.

**ಸಮಯ ಮತ್ತು ಅವಧಿ:** ಮಳೆಗಾಲದ ಯಾವ ತಿಂಗಳಲ್ಲಿ ಹೋಗಬೇಕು ಮತ್ತು ಎಷ್ಟು ದಿನಗಳ ಪ್ರವಾಸ ಎಂಬುದನ್ನು ನಿಗದಿಪಡಿಸಿ. ಕೆಲವು ಸ್ಥಳಗಳಲ್ಲಿ ವಿಪರೀತ ಮಳೆ ಆಗುವುದರಿಂದ ರಸ್ತೆ ಸಂಚಾರಕ್ಕೆ ತೊಂದರೆಯಾಗಬಹುದು. ಈ ಬಗ್ಗೆ ಮೊದಲೇ ಗಮನಿಸಿಕೊಳ್ಳಿ.

**ವಸತಿಯ ಬುಕಿಂಗ್:** ಮಳೆಗಾಲದಲ್ಲಿ ಕೆಲವೊಮ್ಮೆ ಪ್ರವಾಸಿಗರ ಸಂಖ್ಯೆ ಕಡಿಮೆ ಇರುತ್ತದೆ. ಆದರೂ, ಉತ್ತಮ ರೆಸಾರ್ಟ್‌ಗಳು ಅಥವಾ ಹೋಂ ಸ್ಟೇಗಳಲ್ಲಿ ಮೊದಲೇ ಬುಕ್ ಮಾಡಿಕೊಳ್ಳುವುದು ಉತ್ತಮ.

**ಸಾರಿಗೆ:** ಮಳೆಗಾಲದಲ್ಲಿ ಸ್ವಂತ ವಾಹನದಲ್ಲಿ ದೂರ ಪಯಣ ಮಾಡುವುದಾದರೆ, ಚಾಲಕ ಉತ್ತಮ ಅನುಭವವುಳ್ಳವರಾಗಿರಬೇಕು. ಸಾರ್ವಜನಿಕ ಸಾರಿಗೆಯನ್ನು ಆಯ್ಕೆ ಮಾಡುವುದಾದರೆ, ಅದರ ವೇಳಾಪಟ್ಟಿಯನ್ನು ಮೊದಲೇ ತಿಳಿದುಕೊಳ್ಳಿ.




